C 111 (New)

**First Year B.Com. Examination, Oct./Nov. 2014**
**(SLM New) ) (New Scheme)**
**FINANCIAL ACCOUNTING – I**

Time : 3 Hours Max. Marks : 90

PART – A

Answer **any three** questions. **Each** question carries **15** marks.

1. Explain the concepts of Accounting.
2. Journalise the following transactions and post them to the ledger accounts :

| | | | |
|---|---|---|---|
| 2014 Jan. | 1 | Raju commenced business with a capital of | ₹ 10,000 |
| ” ” | 2 | Bought goods for cash | ₹ 5,000 |
| ” ” | 5 | Bought office furnitures for cash | ₹ 1,000 |
| ” ” | 10 | Sold goods for cash | ₹ 1,500 |
| ” ” | 20 | Raju withdrew for personal expenses | ₹ 800 |
| ” ” | 22 | Paid rent | ₹ 500 |
| ” ” | 24 | Received commission | ₹ 100 |
| ” ” | 30 | Sold goods to Ravi | ₹ 4,000 |
| ” ” | 31 | Bought goods from Ganesh | ₹ 1,200 |

3. A sold goods to B for ₹ 8,000 on 4$^{th}$ January 2014 and draws two bills on B, the first for ₹ 3,000 at one month and the second for ₹ 5,000 at 3 months. Both the bills were accepted by B and returned to A.

   The first bill was retained by A till due date and met on the due date. The second bill was discounted by A with his bank on 15$^{th}$ Jan. 2014 for ₹ 4,800. However, on maturity of the second bill, B dishonours it. A meets this bill after paying noting charges ₹ 50. B agrees to accept a new bill for ₹ 5,150 which includes interest for 2 months. This bill was met on the due date. Pass Journal Entries in the books of A and B.

4. From the following particulars, prepare Trading and Profit and Loss Account for the year ended 31-12-2013 and Balance Sheet as on that date.

| | Dr. | Cr. |
|---|---|---|
| | ₹ | ₹ |
| Capital | – | 84,000 |
| Purchases and Sales | 2,00,000 | 3,50,000 |
| Freight | 10,000 | – |
| Carriage | 8,000 | – |
| Sundry Expenses | 1,000 | – |
| Debtors and Creditors | 1,20,000 | 1,27,000 |
| Bad debts | 2,200 | – |
| Salaries | 19,000 | – |
| Discount | 3,000 | 1,200 |
| Rent | 3,000 | – |
| R.B.D. | – | 3,500 |
| Postage and Stationery | 2,800 | – |
| Life Insurance | 2,400 | – |
| Wages | 8,000 | – |
| Returns | 8,600 | 10,300 |
| Bills payable | – | 20,000 |
| Outstanding rent | – | 4,000 |
| Cash at Bank | 7,000 | – |
| Interest accrued on investment | 3,000 | – |
| Stock on 1-1-2013 | 80,000 | – |
| Land and Buildings | 1,00,000 | – |
| Investments | 20,000 | – |
| Patents | 2,000 | – |
| | **6,00,000** | **6,00,000** |

**Adjustments :**

a) Closing stock was valued at ₹1,20,000

b) Wages outstanding ₹ 2,000 and prepaid salary ₹ 5,000

c) Provide 5% R.B.D. on debtors

d) Depreciate land and buildings at 15%

e) Goods costing ₹ 3,000 were destroyed by fire and ₹ 2,000 is admitted by the Insurance Company.

5. Suresh sent 100 computers to Naresh on consignment. The cost of each computer was Rs. 20,000 but invoices to Naresh at cost plus 20%. The expenses of Suresh were freight Rs. 7,000 and Insurance Rs. 3,000/-. During transit one computer was destroyed by fire and the Insurance Company admitted the claim only for Rs. 9,000.

   Naresh sold 40 computers at Rs. 30,000 each and 30 computers at Rs. 35,000 each. Naresh accepted a bill for Rs. 4,00,000 drawn by Suresh as advance for 3 months. This bill was discounted at 10% p.a. Commission is 10% on gross sales is to be made. He incurred the following expenses : Godown rent Rs. 4,000 ; Clearing charges Rs. 8,500; carriage outwards Rs. 3,500.

   Prepare necessary Ledger Accounts in the books of Suresh.

PART – B

Answer **any three** questions. **Each** question carries **10** marks.

6. What are the non-trading concerns ? State the differences between receipts and payments account and income and expenditure account.

7. A firm purchased a machinery for ₹ 40,000 on 1-1-2011. It purchased additional machinery on 1-7-2012 for ₹ 20,000. On 1-4-2013 it sold the second machinery for ₹ 18,000. Write up the machinery account and depreciation A/c for three years by writing off depreciation at 10% p.a., on written down value method.

8. Rama and Krishna undertook a work of construction of a building jointly. The construction price is ₹ 2,50,000. A Joint Bank A/c is opened and Rama deposited ₹ 75,000 and Krishna ₹ 40,000 in connection with the Joint Venture. They share the profits and losses in the ratio of 2 :1. The transactions of Joint Venture are as follows :

   a) Plant purchased ₹ 50,000

   b) Wages paid ₹ 45,000

   c) Materials purchased ₹ 1,20,000

   d) Materials supplied by Rama ₹ 10,000

   e) Architect's fees paid by Krishna ₹ 3,000

   The building was completed and the contract price duly received. Rama takes up plant for ₹ 25,000 and Krishna takes up materials stock at ₹ 9,000.

   Prepare Joint Venture Account, Venturer's Account and Joint Bank Account.

9. Enter the following transactions in proper subsidiary books :

| 2013 | | | Rs. |
|---|---|---|---|
| June | 1 | Bought goods from Rajan | 1,500 |
| ” | 3 | Sold goods to Krishna | 1,000 |
| ” | 5 | Sold to Kumar | 300 |
| ” | 6 | Krishna returned goods | 50 |
| ” | 8 | Purchased from Mani | 600 |
| ” | 9 | Sold to Narayan less 5% | 500 |
| ” | 12 | Returned to Mani | 50 |
| ” | 15 | Allowed to Narayan for damaged goods | 20 |
| ” | 18 | Purchased from Jayaraj Less 4% | 500 |
| ” | 23 | Bought from Paul | 400 |
| ” | 27 | Returned to Paul | 20 |
| ” | 28 | Sold to Anil | 600 |
| ” | 30 | Sent credit note to Anil | 30 |

10. The following errors were detected after the preparation of the Trial Balance :
    a) Commission Rs. 500 paid has been posted twice to commission A/c.
    b) A cash sale of Rs. 2,250 though entered in cash book was posted to sales A/c as Rs. 250.
    c) An amount of Rs. 55 received from Mr. Naresh was posted to his account as Rs. 550.
    d) Purchase of furniture Rs. 1,400 passed through purchase book.
    e) Sales book was overcast by Rs. 600.

    Pass the rectification entries.

## PART – C

Answer **any three** questions. **Each** question carries **5** marks.

11. What is Trial Balance ? Why it is prepared ?
12. What are the disadvantages of single entry system of book keeping ?
13. What do you mean by depreciation ? What are its causes ?
14. Give the proforma of ‘Manufacturing Account’.
15. Write notes on accounting conventions.

## ಕನ್ನಡ ಆವೃತ್ತಿ
## ವಿಭಾಗ - ಎ

ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಉತ್ತರಿಸಿ. **ಪ್ರತಿ** ಪ್ರಶ್ನೆಗೂ **15** ಅಂಕಗಳು.

1. ಲೆಕ್ಕಶಾಸ್ತ್ರದ ಪರಿಕಲ್ಪನೆಗಳನ್ನು ವಿವರಿಸಿ.

2. ಕೆಳಗಿನ ವ್ಯವಹಾರಗಳನ್ನು ರೋಜು ದಾಖಲೆ ಬರೆದು ಖಾತೆಗಳಿಗೆ ವರ್ಗಾಯಿಸಿರಿ :

| | | | | |
|---|---|---|---|---|
| **2014** | **ಜನವರಿ** | 1 | ರಾಜು ಅವರು ವ್ಯಾಪಾರ ಪ್ರಾರಂಭಿಸಿದ್ದು | ₹ 10,000 |
| ” | ” | 2 | ನಗದಿಗೆ ಸರಕು ಖರೀದಿಸಿದ್ದು | ₹ 5,000 |
| ” | ” | 5 | ನಗದಿಗೆ ಕಛೇರಿ ಪೀಠೋಪಕರಣ ಖರೀದಿಸಿದ್ದು | ₹ 1,000 |
| ” | ” | 10 | ನಗದಿಗೆ ಸರಕು ಮಾರಿದ್ದು | ₹ 1,500 |
| ” | ” | 20 | ರಾಜು ಅವರು ಸ್ವಂತಕ್ಕೆ ನಗದು ತೆಗೆದಿದ್ದು | ₹ 800 |
| ” | ” | 22 | ಬಾಡಿಗೆ ನೀಡಿದ್ದು | ₹ 500 |
| ” | ” | 24 | ದಲ್ಲಾಳಿ ಪಡೆದದ್ದು | ₹ 100 |
| ” | ” | 30 | ರವಿ ಅವರಿಗೆ ಸರಕು ಮಾರಿದ್ದು | ₹ 4,000 |
| ” | ” | 31 | ಗಣೇಶ್ ಅವರಿಂದ ಸರಕು ಖರೀದಿಸಿದ್ದು | ₹ 1,200 |

3. ದಿನಾಂಕ 4–1–2014 ರಂದು ‘ಎ’ ರವರು 8,000 ರೂ. ಸರಕನ್ನು ‘ಬಿ’ ರವರಿಗೆ ಮಾರಾಟ ಮಾಡಿದರು ಮತ್ತು ಅದೇ ದಿನ ಅವರಿಂದ ರೂ. 3,000 ದ ಒಂದು ತಿಂಗಳ ವಾಯಿದೆ ಹುಂಡಿ ಮತ್ತು ಮೂರು ತಿಂಗಳ 5,000 ರೂ. ನ ಮತ್ತೊಂದು ಹುಂಡಿಗೆ ಒಪ್ಪಿಗೆ ಪಡೆದರು. ಎರಡೂ ಬಿಲ್ಲುಗಳನ್ನು ‘ಬಿ’ ರವರು ಸ್ವೀಕರಿಸಿದರು ಮತ್ತು A ರವರಿಗೆ ಹಿಂದಿರುಗಿಸಿದರು.

   ಮೊದಲನೇ ಹುಂಡಿಯನ್ನು ವಾಯಿದೆ ದಿನಾಂಕದವರೆಗೆ ‘ಎ’ ರವರೇ ಉಳಿಸಿಕೊಂಡಿದ್ದು ಅದು ಆ ದಿವಸ ಸ್ವೀಕೃತವಾಯಿತು. ಎರಡನೇ ಹುಂಡಿಯನ್ನು ದಿನಾಂಕ 15–1–2014 ರಂದು ರೂ. 4,800 ಗಳಿಗೆ ಬ್ಯಾಂಕಿನಲ್ಲಿ ಸೋಡಿಗೆ ಮುರಿಸಿದರು. ಎರಡನೇ ಹುಂಡಿಯ ವಾಯಿದೆ ದಿನ ‘ಬಿ’ ರವರು ಹುಂಡಿಯನ್ನು ಅಮಾನ್ಯಗೊಳಿಸಿದರು. ‘ಎ’ ರವರು 50 ರೂ. ನೋಟಿಂಗ್ ಶುಲ್ಕದೊಂದಿಗೆ ಈ ಹುಂಡಿಯ ಮೇಲೆ ಹಣ ಪಾವತಿಸಿ, ‘ಬಿ’ ರವರಿಂದ ರೂ .5,150 ಕ್ಕೆ (ಬಡ್ಡಿ ಸೇರಿಸಿ) 2 ತಿಂಗಳ ವಾಯಿದೆಯ ಹೊಸ ಹುಂಡಿಗೆ ಒಪ್ಪಿಗೆ ಪಡೆದರು. ಈ ಹುಂಡಿಯು ವಾಯಿದೆ ದಿನದಂದು ಮಾನ್ಯ ಮಾಡಲ್ಪಟ್ಟಿತು. ‘ಎ’ ಮತ್ತು ‘ಬಿ’ ರವರ ಪುಸ್ತಕದಲ್ಲಿ ರೋಜು ದಾಖಲೆ ಬರೆಯಿರಿ.

4. ಈ ಕೆಳಗಿನ ವಿವರಗಳಿಂದ 31-12-2013 ರ ವರ್ಷಕ್ಕೆ ಮುಕ್ತಾಯವಾದಂತೆ ವ್ಯಾಪಾರದ ಲಾಭ ಮತ್ತು ನಷ್ಟದ ಖಾತೆಗಳು ಹಾಗೂ ಅಂದು ಇದ್ದಂತೆ ಆಸ್ತಿ ಜವಾಬ್ದಾರಿ ಪಟ್ಟಿಯನ್ನು ತಯಾರಿಸಿ :

| | ಖರ್ಚು | ಜಮಾ |
|---|---|---|
| | ₹ | ₹ |
| ಬಂಡವಾಳ | – | 84,000 |
| ಖರೀದಿಗಳು ಮತ್ತು ವಿಕ್ರಯ | 2,00,000 | 3,50,000 |
| ಸಾಗಾಣಿಕೆ ಬಾಡಿಗೆ | 10,000 | – |
| ಗಾಡಿ ಬಾಡಿಗೆ | 8,000 | – |

| | | |
|---|---|---|
| ಇತರೆ ಖರ್ಚುಗಳು | 1,000 | – |
| ಬರಬೇಕಾದ ಸಾಲ ಮತ್ತು ಕೊಡಬೇಕಾದ ಸಾಲಗಳು | 1,20,000 | 1,27,000 |
| ಕರಡು ಸಾಲ | 2,200 | – |
| ಸಂಬಳ | 19,000 | – |
| ಸೋಡಿ | 3,000 | 1,200 |
| ಬಾಡಿಗೆ | 3,000 | – |
| ಕರಡು ಸಾಲದ ನಿಧಿ | – | 3,500 |
| ಅಂಚೆ ಮತ್ತು ಸಾದಿಲ್ವಾರು | 2,800 | – |
| ಜೀವ ವಿಮೆ | 2,400 | – |
| ಕೂಲಿ | 8,000 | – |
| ವಾಪಸಾತಿಗಳು | 8,600 | 10,300 |
| ಕೊಡಬೇಕಾದ ಹುಂಡಿಗಳು | – | 20,000 |
| ಕೊಡಬೇಕಾದ ಬಾಡಿಗೆ | – | 4,000 |
| ಬ್ಯಾಂಕಿನಲ್ಲಿನ ಹಣ | 7,000 | – |
| ಹೂಡಿಕೆಗಳ ಮೇಲಿನ ಬಡ್ಡಿ ಬರಬೇಕಾದದ್ದು | 3,000 | – |
| ಸರಕು ಶಿಲ್ಕು 1-1-2013 | 80,000 | – |
| ಭೂಮಿ ಮತ್ತು ಕಟ್ಟಡ | 1,00,000 | – |
| ಹೂಡಿಕೆಗಳು | 20,000 | – |
| ಪೇಟೆಂಟ್ | 2,000 | – |
| | **6,00,000** | **6,00,000** |

ಹೊಂದಾಣಿಕೆಗಳು :

a) ಅಂತಿಮ ಸರಕು ಶಿಲ್ಕು ರೂ. 1,20,000

b) ಕೂಲಿ ಬಾಕಿ ರೂ. 2,000 ಮತ್ತು ಮುಂಗಡ ಕೊಟ್ಟ ಸಂಬಳ ರೂ. 5,000

c) ಸಂಶಯಾಸ್ಪದ ಸಾಲಕ್ಕೆ ಶೇಕಡ 5 ಮೀಸಲಾತಿ ಅಗತ್ಯ

d) ಭೂಮಿ ಮತ್ತು ಕಟ್ಟಡಗಳ ಮೇಲೆ ಶೇ. 15 ಸವಕಳಿ ತೆಗೆಯಿರಿ

e) ವರ್ಷಾವಧಿಯಲ್ಲಿ 3,000 ರೂ. ಮೌಲ್ಯದ ಸರಕು ಬೆಂಕಿಯಿಂದ ಸುಟ್ಟು ಹೋಗಿದೆ, ವಿಮಾ ಕಂಪನಿಯು 2,000 ರೂ. ಗಳನ್ನು ಈ ಬಾಬ್ತು ಕೊಡಲು ಒಪ್ಪಿದೆ.

5. ಸುರೇಶ್‌ರವರು 100 ಗಣಕಯಂತ್ರಗಳನ್ನು ನರೇಶ್‌ರವರಿಗೆ ಮಾರಾಟ ಮಾಡಲು ಕಳುಹಿಸಿರುತ್ತಾರೆ. ಪ್ರತಿಯೊಂದು ಗಣಕಯಂತ್ರದ ಅಸಲು ಬೆಲೆ ರೂ. 20,000 ಆದರೆ ನರೇಶ್‌ರವರು ಅಸಲು ಬೆಲೆಗಿಂತ ಪ್ರತಿಶತ 20 ರಷ್ಟು ಹೆಚ್ಚಿಗೆ ಮಾರಾಟ ಮಾಡಬೇಕು. ಸುರೇಶ್‌ರವರು ಸಾಗಾಣೆ ಖರ್ಚು ರೂ. 7,000 ಹಾಗೂ ವಿಮಾ ರೂ. 3,000 ರಷ್ಟು ಖರ್ಚು ಮಾಡಿರುತ್ತಾರೆ. ಸರಕನ್ನು ಸಾಗಾಣಿಕೆ ಮಾಡುವ ಸಂದರ್ಭದಲ್ಲಿ ಒಂದು ಗಣಕಯಂತ್ರ ಬೆಂಕಿಗೆ ಆಹುತಿಯಾಗಿ, ವಿಮಾ ಕಂಪನಿಯವರು ಕೇವಲ ರೂ. 9,000 ರಷ್ಟು ಬೆಲೆಯನ್ನು ಕಟ್ಟಿಕೊಟ್ಟಿರುತ್ತಾರೆ.

ನರೇಶ್‌ರವರು 40 ಗಣಕಯಂತ್ರಗಳನ್ನು ಪ್ರತಿಯೊಂದಕ್ಕೆ ರೂ. 30,000 ದಂತೆ ಹಾಗೂ 30 ಗಣಕಯಂತ್ರಗಳನ್ನು ಪ್ರತಿಯೊಂದಕ್ಕೆ ರೂ. 35,000 ರಂತೆ ಮಾರಾಟ ಮಾಡಿರುತ್ತಾರೆ. ನರೇಶ್‌ರವರು ಸುರೇಶ್‌ರವರಿಂದ 3 ತಿಂಗಳ ಮುಂಗಡವಾಗಿ ರೂ. 4,00,000 ದ ಹುಂಡಿಯನ್ನು ಪಡೆದಿರುತ್ತಾರೆ. ಆ ಹುಂಡಿಯನ್ನು ವಾರ್ಷಿಕ ಶೇ. 10 ರಂತೆ ವಟಾಯಿಸಿದ್ದಾರೆ. ಕಮೀಶನನ್ನು ಇವರು ಒಟ್ಟಾರೆ ಮಾರಾಟದ ಮೇಲೆ ಶೇ. 10 ರಂತೆ ಪಡೆಯುತ್ತಾರೆ. ಅವರು ಈ ಕೆಳಗಿನ ವೆಚ್ಚಗಳನ್ನು ಭರಿಸಿರುವುದು : ಉಗ್ರಾಣ ಬಾಡಿಗೆ ರೂ. 4,000, ತೀರುವಳಿ ಖರ್ಚು ರೂ. 8,500, ಮಾರಾಟದ ಮೇಲೆ ಸಾಗಣೆ ವೆಚ್ಚ ರೂ. 3,500.

ಸುರೇಶ್‌ನ ಪುಸ್ತಕದಲ್ಲಿ ಅವಶ್ಯವಿರುವ ಖಾತೆಗಳನ್ನು ತೆರೆಯಿರಿ.

## ವಿಭಾಗ – ಬಿ

ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಉತ್ತರಿಸಿ. **ಪ್ರತಿ** ಪ್ರಶ್ನೆಗೆ **10** ಅಂಕಗಳು.

6. ವ್ಯಾಪಾರೇತರ ಸಂಸ್ಥೆಗಳೆಂದರೆ ಯಾವುವು ? ಆಯ – ವ್ಯಯ ಖಾತೆ ಮತ್ತು ಆದಾಯ ಖರ್ಚಿನ ಖಾತೆಗಳ ನಡುವಿನ ವ್ಯತ್ಯಾಸಗಳನ್ನು ತಿಳಿಸಿ.

7. 1-1-2011 ರಂದು ಒಂದು ಸಂಸ್ಥೆಯು ರೂ. 40,000 ಗಳಿಗೆ ಒಂದು ಯಂತ್ರವನ್ನು ಖರೀದಿಸಿತು. 1-7-2012ರಂದು ಎರಡನೆಯ ಯಂತ್ರವನ್ನು ರೂ. 20,000 ಗಳಿಗೆ ಖರೀದಿ ಮಾಡಿತು. 1-4-2013 ರಂದು ಎರಡನೆಯ ಯಂತ್ರವನ್ನು ರೂ. 18,000 ಗಳಿಗೆ ಮಾರಾಟ ಮಾಡಿತು. 3 ವರ್ಷಗಳಿಗೆ ಯಂತ್ರದ ಖಾತೆ ಮತ್ತು ಸವಕಳಿ ಖಾತೆಯನ್ನು ತಯಾರಿಸಿ ಇಳಿಮುಖ ಪದ್ಧತಿ ಅನುಸರಿಸಿ ಶೇ. 10 ರಂತೆ ಸವಕಳಿಯನ್ನು ತೆಗೆಯಬೇಕು.

8. ರಾಮ ಮತ್ತು ಕೃಷ್ಣ ಜಂಟಿಯಾಗಿ ಒಂದು ಕಟ್ಟಡವನ್ನು ನಿರ್ಮಿಸಲು ಕೆಲಸವನ್ನು ತೆಗೆದುಕೊಂಡಿದ್ದಾರೆ. ನಿರ್ಮಾಣದ ಬೆಲೆ ರೂ. 2,50,000. ಒಂದು ಜಂಟಿ ಬ್ಯಾಂಕಿನ ಖಾತೆಯನ್ನು ತೆರೆದು ಅದರಲ್ಲಿ ರಾಮ 75,000 ರೂ. ಗಳನ್ನು ಮತ್ತು ಕೃಷ್ಣ 40,000 ರೂ.ಗಳನ್ನು ಜಂಟಿ ಉದ್ಯಮಕ್ಕೆ ಸಂಬಂಧಿಸಿದಂತೆ ಠೇವಣಿ ಮಾಡಿರುತ್ತಾರೆ. ಲಾಭ ಮತ್ತು ನಷ್ಟಗಳನ್ನು ಅವರು 2 :1 ಪ್ರಮಾಣದಲ್ಲಿ ಹಂಚಿಕೊಳ್ಳುತ್ತಾರೆ. ಜಂಟಿ ಉದ್ಯಮಕ್ಕೆ ಸಂಬಂಧಿಸಿದಂತೆ ವ್ಯವಹಾರ ಈ ಕೆಳಕಂಡಂತಿದೆ :

| | |
|---|---|
| a) ಸ್ಥಾವರ ಖರೀದಿ | ರೂ. 50,000 |
| b) ಕೂಲಿಗಾಗಿ | ರೂ. 45,000 |
| c) ಸಾಮಗ್ರಿ ಕೊಂಡಿದ್ದು | ರೂ. 1,20,000 |
| d) ರಾಮ ಸಾಮಗ್ರಿ ಪೂರೈಸಿದ್ದು | ರೂ. 10,000 |
| e) ಕೃಷ್ಣರವರು ವಾಸ್ತುಶಿಲ್ಪ ಶುಲ್ಕವನ್ನು ಕೊಟ್ಟಿದ್ದು | ರೂ. 3,000 |

ಕಟ್ಟಡ ಪೂರ್ಣಗೊಂಡಿದ್ದು ಒಪ್ಪಂದದ ಬೆಲೆಯನ್ನು ಸಕಾಲದಲ್ಲಿ ಪಡೆದರು.

ರಾಮ ಸ್ಥಾವರವನ್ನು ರೂ. 25,000 ಮತ್ತು ಕೃಷ್ಣ ಅಂತಿಮ ಸರಕುಗಳನ್ನು ರೂ. 9,000 ತೆಗೆದುಕೊಂಡರು.

ಈ ಖಾತೆಗಳನ್ನು ತಯಾರಿಸಿ : ಜಂಟಿ ಉದ್ಯಮ ಖಾತೆ, ಸಹ ಉದ್ಯಮಗಳ ಖಾತೆ ಮತ್ತು ಜಂಟಿ ಬ್ಯಾಂಕಿನ ಖಾತೆ.

9. ಕೆಳಕಂಡ ವಹಿವಾಟುಗಳನ್ನು ಸೂಕ್ತ ಉಪ – ರೋಜು ಪುಸ್ತಕಗಳಲ್ಲಿ ದಾಖಲಿಸಿ :

| | | | | ರೂ. |
|---|---|---|---|---|
| **2013** | **ಜೂನ್** | 1 | ರಾಜನ್‌ರವರಿಂದ ಸರಕನ್ನು ಕೊಂಡದ್ದು | 1,500 |
| ” | ” | 3 | ಕೃಷ್ಣರವರಿಗೆ ಸರಕು ಮಾರಿದ್ದು | 1,000 |
| ” | ” | 5 | ಕುಮಾರ್‌ರವರಿಗೆ ಮಾರಿದ್ದು | 300 |
| ” | ” | 6 | ಕೃಷ್ಣರವರು ಹಿಂದಿರುಗಿಸಿದ ವಸ್ತುಗಳು | 50 |
| ” | ” | 8 | ಮಣಿರವರಿಂದ ಖರೀದಿಸಿದ್ದು | 600 |
| ” | ” | 9 | ಶೇ. 5ರ ಕಡಿತ ಮಾಡಿ ನಾರಾಯಣ್‌ಗೆ ಮಾರಿದ್ದು | 500 |
| ” | ” | 12 | ಮಣಿರವರಿಗೆ ಹಿಂದಿರುಗಿಸಿದ್ದು | 50 |
| ” | ” | 15 | ನಾಶವಾದ ವಸ್ತುಗಳಿಗಾಗಿ ನಾರಾಯಣ್‌ರವರಿಗೆ ಬಿಟ್ಟುಕೊಟ್ಟಿದ್ದು | 20 |
| ” | ” | 18 | ಶೇ. 4 ರ ಕಡಿತ ಮಾಡಿ ಜಯರಾಜ್‌ರವರಿಂದ ಕೊಂಡು ಕೊಂಡದ್ದು | 500 |
| ” | ” | 23 | ಪಾಲ್‌ರವರಿಂದ ಕೊಂಡದ್ದು | 400 |
| ” | ” | 27 | ಪಾಲ್‌ರವರಿಗೆ ಹಿಂದಿರುಗಿಸಿದ್ದು | 20 |
| ” | ” | 28 | ಅನಿಲ್‌ರವರಿಗೆ ಮಾರಿದ್ದು | 600 |
| ” | ” | 30 | ಅನಿಲ್‌ರವರಿಗೆ ಕ್ರೆಡಿಟ್ ನೋಟ್ ಕಳುಹಿಸಿದ್ದು | 30 |

10. ತಾಳೆಪಟ್ಟಿ ತಯಾರಿಸಿದ ನಂತರ ಈ ಕೆಳಗಿನ ತಪ್ಪುಗಳು ಕಂಡು ಬಂದವು :

a) ದಲ್ಲಾಳಿ ರೂ. 500 ಕೊಟ್ಟಿದ್ದನ್ನು ದಲ್ಲಾಳಿ ಖಾತೆಗೆ ಎರಡು ಸಾರಿ ವರ್ಗಾಯಿಸಲಾಗಿದೆ.

b) ನಗದು ಮಾರಾಟದ ರೂ. 2,250 ಗಳನ್ನು ನಗದು ಪುಸ್ತಕದಲ್ಲಿ ಸರಿಯಾಗಿ ಬರೆದಿದ್ದರೂ ಮಾರಾಟ ಖಾತೆಯಲ್ಲಿ ರೂ. 250 ಎಂದು ಬರೆಯಲ್ಪಟ್ಟಿದೆ.

c) ನರೇಶ್‌ರವರಿಂದ ರೂ. 55 ಪಡೆದಿರುವುದನ್ನು ರೂ. 550 ಎಂದು ಅವರ ಖಾತೆಗೆ ವರ್ಗಾಯಿಸಿದೆ.

d) ರೂ. 1,400 ಗಳಿಗೆ ಪೀಠೋಪಕರಣ ಕೊಂಡಿದ್ದು ಅದನ್ನು ಖರೀದಿ ಪುಸ್ತಕದಲ್ಲಿ ಬರೆಯಲಾಗಿದೆ.

e) ಮಾರಾಟ ಪುಸ್ತಕದಲ್ಲಿ ರೂ. 600 ಗಳಷ್ಟು ಹೆಚ್ಚಿಗೆ ತೋರಿಸಲಾಗಿದೆ.

ತಿದ್ದುಪಡಿ ನಮೂದನ್ನು ತಯಾರಿಸಿ.

## ವಿಭಾಗ – ಸಿ

ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಉತ್ತರಿಸಿ. **ಪ್ರತಿ** ಪ್ರಶ್ನೆಗೂ **5** ಅಂಕಗಳು.

11. ತಾಳೆ ಪಟ್ಟಿ ಎಂದರೇನು ? ಏತಕ್ಕಾಗಿ ಅದನ್ನು ತಯಾರಿಸಲಾಗುವುದು ?

12. ಏಕ ನಮೂದು ಪದ್ಧತಿಯ ಅನಾನುಕೂಲತೆಗಳನ್ನು ವಿವರಿಸಿ.

13. ಸವಕಳಿ ಎಂದರೇನು ? ಸವಕಳಿಯ ಕಾರಣಗಳು ಯಾವುವು ?

14. ‘ಉತ್ಪಾದನಾ ಖಾತೆಯ’ ನಮೂನೆಯನ್ನು ಬರೆಯಿರಿ.

15. ಲೆಕ್ಕಶಾಸ್ತ್ರದ ವಾಡಿಕೆಯ ಬಗ್ಗೆ ಟಿಪ್ಪಣಿ ಬರೆಯಿರಿ.